



# ತಿನ್ನಲಾರದ ಕೇಕ್‌ಗಳು

ಚಿತ್ರ– ಬರಹ:

**ಮಂಜುನಾಥ ಡಿ.ಎಸ್.**

**1944**ರಲ್ಲಿ ನ್ಯೂಯಾರ್ಕ್‌ನಲ್ಲಿ ಜನಿಸಿದ ಕಲಾವಿದೆ ಪ್ಯಾಟ್ ಲ್ಯಾಷ್ ವಿವಿಧ ಕಲಾ ಪ್ರಕಾರಗಳಲ್ಲಿ ಹೆಸರು ಮಾಡಿದವರು. ಇವರ 45 ವರ್ಷಗಳ ಸಾಧನೆಯನ್ನು ಪರಿಚಯಿಸುವ ಸಮಗ್ರ ಪ್ರದರ್ಶನ 'ಜರ್ನೀಸ್ ಆಫ್ ದಿ ಹಾರ್ಟ್' ಕ್ಯಾಲಿಫೋರ್ನಿಯಾದ ಪಾಮ್ ಸ್ಪ್ರಿಂಗ್ ಆರ್ಟ್ ಮ್ಯೂಸಿಯಂನಲ್ಲಿ 2017ರ ಮಾರ್ಚ್ 25ರಿಂದ ಅಕ್ಟೋಬರ್ 15ರ ವರೆಗೆ ಏರ್ಪಾಟಾಗಿತ್ತು. ಲ್ಯಾಷ್‌ರ ತಂದೆ ಬೇಕರಿಯೊಂದರ ಮಾಸ್ಟರ್ ಚೆಫ್ ಆಗಿದ್ದರು. ಅವರ ಕೈಕೆಳಗೆ ತರಬೇತಿ ಪಡೆದ ಲ್ಯಾಷ್ ಕೇಕ್ ತಯಾರಿಸುವ ಕಲೆಯಲ್ಲಿ ಪರಿಣತಿ ಪಡೆದುದಲ್ಲದೆ ಐಸಿಂಗ್ ಮಾಡುವುದರಲ್ಲಿಯೂ ನಿಷ್ಣಾತರಾಗಿದ್ದರು.

ಈ ಕುಶಲತೆಯನ್ನು ಆಕೆ ವಿಶಿಷ್ಟ ಕಲಾ ಪ್ರಕಾರವೊಂದರ ಸೃಷ್ಟಿಗೆ ಬಳಸಿಕೊಂಡರು. ಸಕ್ಕರೆ ಮಿಶ್ರಿತ ಬೆಣ್ಣೆಗೆ ಬದಲಾಗಿ ಅಕ್ರಲಿಕ್ ಬಣ್ಣ ಹಾಗೂ ಕ್ಯಾಂಡಿ ಸ್ಪ್ರಿಂಕ್ಲರ್ಸ್‌ಗೆ ಪರ್ಯಾಯವಾಗಿ ಗುಂಡುಸೂಜಿ ಮತ್ತು ಮುತ್ತುಗಳನ್ನು ಬಳಸಿಕೊಂಡು ಚಿತ್ತಾಕರ್ಷಕ ಕೇಕ್ ಕಲಾಕೃತಿಗಳನ್ನು ನಿರ್ಮಿಸಿ ಪ್ರಖ್ಯಾತಿ ಗಳಿಸಿದರು.

ಜನುಮ ದಿನ, ವಿವಾಹ, ಪ್ರಭು ಭೋಜನ ಸಂಸ್ಕಾರ (ಕಮ್ಯೂನಿಯನ್), ಯಹೂದ್ಯ ಸಂಪ್ರದಾಯದ ಉಪದೇಶ ಸೂತ್ರ, ಹೀಗೆ ಬಾಳ ಪಯಣದ ಪ್ರಮುಖ ಘಟ್ಟಗಳ ಅವಿಭಾಜ್ಯ ಅಂಗವಾದ ಕೇಕ್ ಕಾಲ ಸೂಚಕವಾಗಿರುವುದನ್ನು ಈ ಕಲಾವಿದೆ ಗುರ್ತಿಸಿದರು. ಭಾವಪರವಶತೆಯನ್ನು ಉಕ್ಕಿಸುವ ವಿಶೇಷ ಗುಣ ಕೇಕ್‌ಗಳಿಗೆ ಇರುವುದನ್ನು ಮನಗಂಡ ಈಕೆ ತನ್ನ ಅನಿಸಿಕೆಗಳ ಅಭಿವ್ಯಕ್ತಿಗಾಗಿ ಕೇಕ್ ಕಲಾಕೃತಿಗಳ ಮಾಧ್ಯಮವನ್ನು ಆಯ್ದು ಕೊಂಡರು. ಈ ಕಲಾವಿದೆ ಸೃಜಿಸಿರುವ ಸೂಕ್ಷ್ಮ ವಿವರಗಳ ಮನಮೋಹಕ ಕೇಕ್‌ಗಳು ವೀಕ್ಷಕರನ್ನು ಅಕರ್ಷಿಸಿ, ಭಾವುಕರನ್ನಾಗಿಸಿ ದರೆ ಅಚ್ಚರಿ ಪಡಬೇಕಿಲ್ಲ!

ಜೀವಿತಾವಧಿಯ ಅನೇಕ ಆಚರಣೆಗಳಲ್ಲಿ ಸದಾ ಮುಂಚೂಣಿ ಯಲ್ಲಿರುವ ಕೇಕ್ ಜೀವಿಯ ಅಂತಿಮ ಮತ್ತು ಅತಿ ಮಹತ್ತರ ಪರಿವರ್ತನೆಯಾದ ಮರಣ ಸಂಬಂಧದ ಆಚರಣೆಗಳಲ್ಲಿ ಕಾಣದ ಕೊರತೆಯನ್ನು ಲ್ಯಾಷ್ ಗಮನಿಸಿದರು. ಈ ಕೊರತೆಯನ್ನು ತುಂಬಲು 1980ರಲ್ಲಿ ಲ್ಯಾಷ್ ತನ್ನ ಮೊದಲ ಕಪ್ಪು ಬಣ್ಣದ ಕೇಕ್ ಕಲಾಕೃತಿಯನ್ನು ನಿರ್ಮಿಸಿ ಪ್ರದರ್ಶಿಸಿದರು. ಕತ್ತರಿಸಿದ ಕಪ್ಪು ಕಾಗದ, ಹಕ್ಕಿಗಳ ಕಪ್ಪು ಪುಕ್ಕಗಳು, ಮೂಳೆಗಳು, ಮತ್ತು ಕಪ್ಪು ಕೂದಲುಗಳು ಇತ್ಯಾದಿ ಅಮಂಗಳ ಸೂಚಕ ಸಾವಯವ ವಸ್ತುಗಳನ್ನು ಈ ಕಲಾಕೃತಿಗಳ ರಚನೆಯಲ್ಲಿ ಬಳಸಿಕೊಂಡರು.

